Fax : 08192 - 208444
Telephone : 08192 - 208309

website : davangereuniversity.ac.in
e-mail : cdcdu2013@gmail.com

# ದಾವಣಗೆರೆ ವಿಶ್ವವಿದ್ಯಾನಿಲಯ

ವಿಶ್ವವಿದ್ಯಾನಿಲಯ ಕಾರ್ಯಾಲಯ, ಶಿವಗಂಗೋತ್ರಿ, ದಾವಣಗೆರೆ – 577 007.

## ಕಾಲೇಜು ಅಭಿವೃದ್ಧಿ ಪರಿಷತ್

ಸಂಖ್ಯೆ:ದಾವಿವಿ/ಸಿಡಿಸಿ/ಸಂ–111/2022–23/5194 ದಿನಾಂಕ:29.03.2023

**: ಕಛೇರಿ ಜ್ಞಾಪನ :**

**ವಿಷಯ :** ಶಾಶ್ವತ ಸಂಯೋಜನೆ ನವೀಕರಣ ನೀಡುವ ಬಗ್ಗೆ.

**ಉಲ್ಲೇಖ :**
1. ವಿಶ್ವವಿದ್ಯಾನಿಲಯದ ಪತ್ರ ಸಂಖ್ಯೆ:ದಾವಿವಿ/ಸಿಡಿಸಿ/ಸಂ–111/2022–23/3177, ದಿನಾಂಕ:16.11.2022.
2. ಸರ್ಕಾರದ ಸುತ್ತೋಲೆ ಪತ್ರ ಸಂಖ್ಯೆ: ಇಡಿ 119 ಯುಆರ್‌ಸಿ 2021, ದಿನಾಂಕ:23.07.2021.
3. ಸ್ಥಳೀಯ ತಪಾಸಣಾ ಸಮಿತಿ ವರದಿ ದಿನಾಂಕ:17.06.2022.
4. ಸರ್ಕಾರದ ಆದೇಶ ಪತ್ರ ಸಂಖ್ಯೆ: ಇಡಿ 29 ಯುಎನ್‌ಇ 2020, ದಿನಾಂಕ:12.02.2021.
5. ಮಾನ್ಯ ಕುಲಪತಿಗಳ ಅನುಮೋದನೆ ದಿನಾಂಕ:24.03.2023.

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖ(1)ರ ಪತ್ರದಲ್ಲಿ, **ಬಿ.ಇ.ಎ ಶಿಕ್ಷಣ ಮಹಾವಿದ್ಯಾಲಯ, ದಾವಣಗೆರೆ** – ಈ ಕಾಲೇಜಿಗೆ 2022–23ನೇ ಶೈಕ್ಷಣಿಕ ಸಾಲಿಗೆ ಮುಂದುವರಿಕೆ ಸಂಯೋಜನೆಗೆ ನೀಡಲಾಗಿದ್ದ ಶಾಶ್ವತ ಸಂಯೋಜನಾ ಪದವಿ ಕೋರ್ಸು, ಭಾಷೆ, ಮತ್ತು ಪ್ರವೇಶಮಿತಿಗಳನ್ನು ಹಿಂಪಡೆಯಲಾಗಿದ್ದು, ತಮ್ಮ ಕಾಲೇಜಿನ ಶಾಶ್ವತ ಸಂಯೋಜನೆ ನವೀಕರಣ ಕುರಿತು, ಉಲ್ಲೇಖ(2)ರ ಸರ್ಕಾರದ ನಿರ್ದೇಶಾನುಸಾರ, ಸ್ಥಳೀಯ ತಪಾಸಣಾ ಸಮಿತಿಯು ನೀಡಿರುವ ಶಿಫಾರಸ್ಸನ್ನು ದಿನಾಂಕ:24.02.2023ರಂದು ನಡೆದ ವಿದ್ಯಾವಿಷಯಕ ಪರಿಷತ್ ಸಭೆ ಮತ್ತು ಸಿಂಡಿಕೇಟ್ ಸಭೆಗಳಲ್ಲಿ ಯಥಾವತ್ತಾಗಿ ಅನುಮೋದಿಸಲಾಗಿದೆ

ಅದುದರಿಂದ, ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಅಧಿನಿಯಮ 2000, ಪ್ರಕರಣ 62(3)ರನ್ವಯ ಹಾಗೂ ಮಾನ್ಯ ಕುಲಪತಿಗಳ ಅನುಮೋದನೆ ಮೇರೆಗೆ, ಸ್ಥಳೀಯ ತಪಾಸಣಾ ಸಮಿತಿಯು ವಿಧಿಸಿರುವ ಷರತ್ತುಗಳನ್ನು ಕಡ್ಡಾಯವಾಗಿ ಕಾರ್ಯಗತಗೊಳಿಸಿ, ಪೂರಕ ದಾಖಲೆಗಳೊಂದಿಗೆ ಅನುಪಾಲನಾ ವರದಿಯನ್ನು ದಿನಾಂಕ:29.04.2023ರೊಳಗಾಗಿ ವಿಶ್ವವಿದ್ಯಾನಿಲಯಕ್ಕೆ ಸಲ್ಲಿಸುವ ಷರತ್ತಿಗೊಳಪಟ್ಟು, 2022–23ನೇ ಸಾಲಿನ ಶೈಕ್ಷಣಿಕ ಸಾಲಿನಿಂದ ಮುಂದಿನ 05(ಐದು) ವರ್ಷಗಳ ಅವಧಿಗೆ ಮಾತ್ರ ಈ ಕೆಳಕಂಡಂತೆ ಶಾಶ್ವತ ಸಂಯೋಜನೆಯನ್ನು ತಾತ್ಕಾಲಿಕವಾಗಿ ನವೀಕರಿಸಲಾಗಿದೆ. **(2022–23 ರಿಂದ 2026–27ನೇ ಸಾಲಿನವರೆಗೆ)**

| ಕಾಲೇಜಿನ ಹೆಸರು | : | ಬಿ.ಇ.ಎ ಶಿಕ್ಷಣ ಮಹಾವಿದ್ಯಾಲಯ, ದಾವಣಗೆರೆ | | |
|---|---|---|---|---|
| ಆನ್‌ಲೈನ್ ಸಂಯೋಜನಾ ಅಂಕಗಳು | : | 88.4% | | |
| ಪದವಿ | ಭಾಷೆಗಳು | ಐಚ್ಛಿಕ ವಿಷಯ ಸಮೂಹಗಳು | ಪ್ರವೇಶಮಿತಿ | ಯೂನಿಟ್ |
| ಬಿ.ಇಡಿ | ಕನ್ನಡ, ಇಂಗ್ಲೀಷ್ | ಕಡ್ಡಾಯ ವಿಷಯಗಳು | 50 | 01 |

**ಷರತ್ತುಗಳು:**

1. ಕಾಲೇಜಿನ ಶಾಶ್ವತ ಸಂಯೋಜನೆ ನವೀಕರಣ ನೀಡಲು, ಆನ್‌ಲೈನ್ ಸಂಯೋಜನಾ ಮಾರ್ಗಸೂಚಿ/ಮಾನದಂಡಗಳನ್ವಯ ಅವಶ್ಯವಿರುವ ಕನಿಷ್ಠ ಸಂಯೋಜನಾ ಅಂಕಗಳು >65% ಇರಬೇಕಾಗಿರುತ್ತದೆ. **2022–23ನೇ ಶೈಕ್ಷಣಿಕ ಸಾಲಿನಲ್ಲಿ** ಆನ್‌ಲೈನ್ ಸಂಯೋಜನಾ ಸಂಯೋಜನಾ ಅಂಕಗಳು 88.4% (>65%) ಬಂದಿರುತ್ತವೆ.

ಸರ್ಕಾರದ ಆದೇಶದ ಮೇರೆಗೆ, ಪ್ರಸಕ್ತ ಶೈಕ್ಷಣಿಕ ವರ್ಷಕ್ಕೆ ಒಂದು ಬಾರಿಯ ಕ್ರಮವಾಗಿ ಸಂಯೋಜನಾ ಅಂಕಗಳಲ್ಲಿ ಶೇಕಡಾ 05ರಷ್ಟು ರಿಯಾಯಿತಿ ನೀಡಿ ಶಾಶ್ವತ ಸಂಯೋಜನೆ ನವೀಕರಿಸಲಾಗಿದೆ.

ಈ ಹಿನ್ನೆಲೆಯಲ್ಲಿ, ಮುಂಬರುವ ಎರಡು ಶೈಕ್ಷಣಿಕ ವರ್ಷಗಳಲ್ಲಿ >65% ಅಂಕಗಳನ್ನು ಗಳಿಸದಿದ್ದಲ್ಲಿ ಮತ್ತು ಭೂಮಿಯು ಸೇರಿದಂತೆ ಆನ್‌ಲೈನ್ ಸಂಯೋಜನೆಯ ನಿಗದಿತ ಮಾನದಂಡಗಳ (Defined Parameters) 08 ಅಂಶಗಳನ್ನು ಪೂರ್ಣಗೊಳಿಸದ ಪಕ್ಷದಲ್ಲಿ, ಕಾಲೇಜಿಗೆ 2022-23 ರಿಂದ 2026-27ನೇ ಶೈಕ್ಷಣಿಕ ಸಾಲಿನವರೆಗೆ ನೀಡಲಾಗಿರುವ ಶಾಶ್ವತ ಸಂಯೋಜನೆಯನ್ನು ರದ್ದುಪಡಿಸಲಾಗುವುದು.

2. ಸ್ಥಳೀಯ ವಿಚಾರಣಾ ಸಮಿತಿ ವಿಧಿಸಿರುವ ಪ್ರತಿಯೊಂದು ಷರತ್ತನ್ನು ಪಾಲಿಸತಕ್ಕದ್ದು ಹಾಗೂ ಅನುಬಂಧ-1 ರಲ್ಲಿರುವ ಆನ್‌ಲೈನ್ ಸಂಯೋಜನೆಯ ನಿಗದಿತ ಮಾನದಂಡಗಳನ್ನು (Defined Parameters) ಕಾಲೇಜಿನಲ್ಲಿ ಕಟ್ಟುನಿಟ್ಟಾಗಿ ಅಳವಡಿಸಿಕೊಳ್ಳತಕ್ಕದ್ದು.
3. ಸರ್ಕಾರವು ಕಾಲ ಕಾಲಕ್ಕೆ ಹೊರಡಿಸುವ, ಜಾರಿಯಲ್ಲಿರುವ ಸರ್ಕಾರದ ನಿಯಮಾವಳಿ ಮತ್ತು ಆದೇಶಗಳನ್ನು ಪಾಲಿಸತಕ್ಕದ್ದು.
4. ವಿಶ್ವವಿದ್ಯಾನಿಲಯದ ಅನುಶಾಸನ, ಪರಿನಿಯಮಾವಳಿ, ಆಧ್ಯಾದೇಶಗಳನ್ನು ಮತ್ತು ಇತ್ಯಾದಿಗಳನ್ನು ಕಟ್ಟುನಿಟ್ಟಾಗಿ ಪಾಲಿಸತಕ್ಕದ್ದು.
5. ಕಾಲೇಜಿನ ಶಾಶ್ವತ ಸಂಯೋಜನೆಯನ್ನು 2027-28ನೇ ಶೈಕ್ಷಣಿಕ ಸಾಲಿಗೆ ನವೀಕರಿಸುವುದು ಹಾಗೂ ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಕಾಯ್ದೆ 2000, ಸೆಕ್ಷನ್ 62(3)ರನ್ವಯ, ಸ್ಥಳೀಯ ತಪಾಸಣಾ ಸಮಿತಿಯಿಂದ ಕಾಲೇಜಿನ ಭೌತಿಕ ಪರಿಶೀಲನೆಗೆ ಒಳಪಡುವುದು.
6. ವಿಶ್ವವಿದ್ಯಾನಿಲಯವು ಕಾಲ-ಕಾಲಕ್ಕೆ ಕೇಳುವ ಮಾಹಿತಿ ಒದಗಿಸಿ, ನಿಗದಿಪಡಿಸಿದ ಶುಲ್ಕಗಳನ್ನು ಪಾವತಿಸತಕ್ಕದ್ದು.

**ಸಂಯೋಜನಾ ವರದಿ ಲಗತ್ತಿಸಿದೆ.**

ಆದೇಶದ ಮೇರೆಗೆ,

ಕುಲಸಚಿವರು
ದಾವಣಗೆರೆ ವಿಶ್ವವಿದ್ಯಾನಿಲಯ
ಶಿವಗಂಗೋತ್ರಿ, ದಾವಣಗೆರೆ-577007

ಗೆ,

1. ಪ್ರಾಂಶುಪಾಲರು, ಬಿ.ಇ.ಎ. ಶಿಕ್ಷಣ ಮಹಾವಿದ್ಯಾಲಯ, 2ನೇ ಮುಖ್ಯರಸ್ತೆ, 1ನೇ ಕ್ರಾಸ್, ಶಿವಲಿಂಗಪ್ಪ ಬಡಾವಣೆ, ದಾವಣಗೆರೆ 577 004.
2. ಕಛೇರಿ ಪ್ರತಿ